ಇವನದೆಂಥ ಹೊಸ ನಮೂನೆ ಅನ್ನಿಸಿದರೂ 'ಏನೋ ಅರ್ಜೆಂಟಿರಬೇಕು, ಬೇಗ ಬಂದಿದಾನೆ' ಅಂದುಕೊಂಡ. ಆ ಕಿರಿದಾದ ಬೀದಿಯಲ್ಲಿ ಹಾಲು ಪ್ಯಾಕೆಟ್ ತರಲೆಂದೋ, ಬೇರೆ ಯಾವುದ್ಯಾವುದೋ ಕೆಲಸಕ್ಕೆ ಅತ್ತಿತ್ತ ಹಾಯುತ್ತಿದ್ದವರು ನಿತ್ಯ ನೋಡುತ್ತಿದ್ದರೂ ಇಂದು ಮಾತ್ರ 'ಇದ್ಯಾವುದೋ ಹೊಸ ಅಂಗಡಿ ಶುರುವಾಗಿದೆ' ಎನ್ನುವ ಕುತೂಹಲದ ದೃಷ್ಟಿಯನ್ನು ಬೀರುತ್ತಲೇ ಸಾಗುತ್ತಿದ್ದರು. ಬೆಳಗಿನ ಉಲ್ಲಾಸದ ಹೊತ್ತಿನಲ್ಲಿ ನಿದ್ದೆಯ ಜೊಂಪು ಪೂರ್ತಿ ಅಳಿಯದಿದ್ದರೂ, ಯೂನಿಫಾರ್ಮ ಹಾಕಿ, ಬೆನ್ನಿಗೆ ಭಾರದ ಚೀಲ ನೇತು ಹಾಕಿಕೊಂಡ ಮಕ್ಕಳು ಗುಂಪಾಗಿ ಸಾಗುತ್ತಿದ್ದವರು ಮನೋಹರನ ಅಂಗಡಿಯೆದುರು ತುಸು ಹೊತ್ತು ನಿಂತು ಶಾಲೆಗೆ ಹೋಗಬೇಕಾದ ಸಣ್ಣನೆಯ ಸಂಕಟಕ್ಕೆ ತುಸು ವಿರಾಮ ಕೊಡುತ್ತ, ಆ ಅಂಗಡಿಯೊಳಗಿನದನ್ನು ಹೊಸತೆಂಬಂತೆ ನೋಡುತ್ತಿದ್ದರು. ಬೀದಿಯ ತುಸು ದೂರದ ತಿರುವಿನಲ್ಲಿದ್ದ ಪ್ರಭುರಾಯರ ಹೋಟೆಲಿಗೆ ಬೆಳಗಿನ ಮೊದಲ ಕಪ್ ಚಾ ಕುಡಿಯಲು ಬಂದವರು ಕ್ಷಣ ನಿಂತು ಇಷ್ಟೆಲ್ಲ ಬೇಗ ತೆರೆದ ಮನೋಹರನ ಅಂಗಡಿಯನ್ನು ನೋಡುತ್ತ ಹೋಟೆಲಿನ ಒಳಹೊಕ್ಕು ಅಲ್ಲಿದ್ದ ಪರಿಚಿತರಲ್ಲಿ ಕಾರಣ ಕೇಳಬೇಕೆನ್ನುವಷ್ಟರಲ್ಲಿ ಚಾ ಮತ್ತು ಉಪ್ಪಿಟ್ಟು, ಬನ್‌ಗಳ ಸುವಾಸನೆಗೆ ಅದನ್ನು ಮರೆತುಬಿಡುತ್ತಿದ್ದರು.

ತಾನು ಬೇಗ ಬಾಗಿಲು ತೆರೆದಿರುವದಕ್ಕೆ ಸುತ್ತೆಲ್ಲ ಅಷ್ಟೆಲ್ಲ ಸಂಗತಿಗಳು ಜರುಗುತ್ತಿವೆ ಎನ್ನುವದರ ಅರಿವಿಲ್ಲದವನಂತೆ ಮನೋಹರ ದಪ್ಪನೆಯ ಚಾದರ ಹಾಸಿ, ಗೋಡೆಗೊರಗುವ ನಿತ್ಯದ ಜಾಗದಲ್ಲಿ ಕೂತಿದ್ದ. ಅವನದು ಕರಕುಶಲತೆಯ ಅಂಗಡಿ. ಮೊದಲು ಮದುಮಕ್ಕಳಿಗೆ ಬಾಸಿಂಗ, ಅಂಗಡಿಗಳಿಗೆ ಬೋರ್ಡು ಬರೆದುಕೊಡುತ್ತಿದ್ದ ಮನೋಹರ ನಂತರದಲ್ಲಿ ಮದುವೆ ಸಂದರ್ಭದಲ್ಲಿ ಕಾರಿಗೆ, ಮಂಟಪಕ್ಕೆ ತೂಗು ಹಾಕುವ ವಧು ವರರ ಹೆಸರಿನ ಫಲಕಗಳನ್ನು ತಯಾರಿಸಿಕೊಡುವದನ್ನೂ ದಾಟಿ ಈಗ ಮದುವೆ, ಉತ್ಸವಗಳಿಗೆ ಡೆಕೋರೇಷನ್, ಪ್ರಚಾರಕ್ಕೆ ಅಗತ್ಯವಾದ ಫ್ಲೆಕ್ಸ್‌ಗಳನ್ನು ಸಿದ್ಧಮಾಡಿಕೊಡುವ ಮಟ್ಟಕ್ಕೆ ಬಂದಿದ್ದ. ಹತ್ತಾರು ನಮೂನೆಯ ಕೆಲಸಗಳ ಆ ಗಜಿಬಿಜಿಯಲ್ಲಿ ಹೇಳಿದ ಸಮಯಕ್ಕೆ ಸರಿಯಾಗಿ ಒದಗಿಸಿ, ಸಿಕ್ಕಾಪಟ್ಟೆ ಚಾರ್ಜ್ ಮಾಡದೇ ಗ್ರಾಹಕರ ಒಲವನ್ನು ಗಳಿಸಿದ್ದ ಕಾರಣ ಒಮ್ಮೆ ಬಂದವರು ಮತ್ತೆ ಮನೋಹರನ ಬಳಿಯೇ ಬರುತ್ತಿದ್ದರು. ಆಗೀಗ ಅವನ ಬಳಿ ಬಾಸಿಂಗ ಮಾಡಿಸಿದ ಅಥವಾ ಮಂಟಪದ ಡೆಕೋರೇಷನ್ ಮಾಡಿಸಿದ ಒಬ್ಬಿಬ್ಬರ ಬಾಯಿಂದ 'ಏನೇ ಆಗಲಿ, ನಿನ್ನ ಕೈಗುಣ ಚೆನ್ನಾಗುಂಟೋ, ನಮ್ಮನೆ ಮದುವೆ ಹೂ ಎತ್ತಿದಾಂಗೇ ಆಯ್ತೋ' ಎನ್ನುವ ಹೊಗಳಿಕೆ ಸಲ್ಲುತ್ತಿದ್ದವು. ಕೆಲವರು ತಮ್ಮ ಮಕ್ಕಳ ಉಡಾಳತನಕ್ಕೋ, ಆಲಸಿತನಕ್ಕೋ ಮನೋಹರನನ್ನು ಉದಾಹರಿಸಿ 'ನೋಡೋ, ಆ ಮನೂನನ್ನಾದರೂ ನೋಡಿ ಕಲಿಯೋ, ಇಪ್ಪತ್ತೈದರ ಹುಡುಗ ಎಷ್ಟು ಚಲೋದಾಗಿ ಕಸುಬು ಕಲ್ತೀದಾನೆ ಎಂದು. ಹೆಂಗೇ ದುಡೀತಾನೆ ಎಂದು. ನಿನಗೂ ಆಯ್ತು ವರ್ಷಾ, ದಂಡಕ್ಕೆ' ಎಂದು ಗದರಿಕೊಳ್ಳುತ್ತಿದ್ದರು. ಮನೋಹರನ ಕುರಿತಾಗಿ ದೊಡ್ಡವರಿಂದ ಒಂದು ಬಗೆಯ ಸಹಾನುಭೂತಿ ಬೆರೆತ ಪ್ರೀತಿ ವ್ಯಕ್ತವಾದರೆ 'ಅಂವಾ ಎಂಥಾ ಚೊದ್ದ, ಮೂರೊತ್ತು ಬರೇ ಕೆಲಸದಲ್ಲೇ ಇರ್ತಾನೆ. ಎಂಜಾಯ್ ಮಾಡೋದು ಗೊತ್ತಿಲ್ಲದ ಪ್ಯಾಲಿ' ಎಂದೆಲ್ಲ ಚಿಕ್ಕವರು ಗೊಣಗಿಕೊಳ್ಳುತ್ತಿದ್ದರು.

ಮನೋಹರ ತಲೆಬಗ್ಗಿಸಿ ಕೈಯಲ್ಲಿ ಹಿಡಿದ ಕೆಲಸವನ್ನ ಅನ್ಯಮನಸ್ಕತೆಯಿಂದಲೇ ಮಾಡುತ್ತಿದ್ದ. ತಾನೇನು ಮಾಡುತ್ತಿದ್ದೇನೆ ಎನ್ನುವದೂ ಅವನಿಗೆ ತೋಚದಂತಿತ್ತು. ರಸ್ತೆ ಮೇಲಿನ ಹಾದು ಹೋಗುವ ಜನರ ಕುತೂಹಲದ ನೋಟವಾಗಲೀ, ಬಾಗಿಲಲ್ಲೇ ನಿಂತು ಈ ಅಂಗಡಿ ಇವತ್ತು ಬೆಳಿಗ್ಗೆ ಒಡಮೂಡಿದ್ದೋ ಎನ್ನುವ ಕೌತುಕದಲ್ಲಿ ತಮ್ಮ ಪುಟ್ಟ ಕಣ್ಣುಗಳ ದೃಷ್ಟಿಯನ್ನು ಒಳನುಗ್ಗಿಸುತ್ತಿದ್ದ ಮಕ್ಕಳ ಕಲರವವಾಗಲೀ ಅವನನ್ನು ತಾಕುತ್ತಿರಲಿಲ್ಲ. ದಿನದಂತೆ ಬರುವ ಗೋಪಿ ಅಷ್ಟು ದೂರದಿಂದಲೇ ತಮ್ಮ